


بسم اللهِ الرّحمٰن الرّحیم

# ರಂಝಾನ್ ಮತ್ತು ಪವಿತ್ರ ಖುರ್‌ಆನ್ ನಡುವಿನ ವಿಶೇಷ ಸಂಬಂಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14–03–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನ ಕೃಪೆಯಿಂದ ನಾವು ರಮಝಾನಿನ ಎರಡನೇ ಹತ್ತು ದಿನಗಳಿಂದ ಸಾಗುತ್ತಿದ್ದೇವೆ. ಅಲ್ಲಾಹನು ರಮಝಾನಿನೊಂದಿಗೆ ಪವಿತ್ರ ಖುರ್‌ಆನಿನ ಒಂದು ವಿಶೇಷ ಸಂಬಂಧವನ್ನು ವಿವರಿಸಿದ್ದಾನೆ. ಅಲ್ಲಾಹನು ಹೇಳುತ್ತಾನೆ: ಸಕಲ ಮಾನವರಿಗೆ ಸನ್ಮಾರ್ಗದರ್ಶಕವಾದ ಹಾಗೂ ಸತ್ಯ ಮತ್ತು ಅಸತ್ಯದಲ್ಲಿ ವ್ಯತ್ಯಾಸವನ್ನುಂಟುಮಾಡುವ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ, ಈ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಬಹಳಷ್ಟು ಓದುವುದರತ್ತ ಗಮನ ಸೆಳೆಯಲಾಗಿದೆ.

ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್[ಅ] ಸಹ ಈ ಕುರಿತು ಗಮನ ಸೆಳೆದಿದ್ದಾರೆ. ಈ ಅನುಗ್ರಹೀತ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಬಹಳವಾಗಿ ಓದಬೇಕು ಎಂದು ಹಝ್ರತ್ ಪೈಗಂಬರ್[ಸ] ಸಹ ವಿಶೇಷವಾಗಿ ಗಮನ ಸೆಳೆದಿದ್ದಾರೆ. ಪ್ರತಿ ವರ್ಷ ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನಿನ ಅವತೀರ್ಣವಾದಷ್ಟು ಭಾಗವನ್ನು ಹಝ್ರತ್ ಜಿಬ್ರೀಲ್[ಅ] ಒಂದು ಬಾರಿ ಹಝ್ರತ್ ಪೈಗಂಬರ್[ಸ]ರೊಂದಿಗೆ ಓದಿ ಪೂರ್ಣಗೊಳಿಸುತ್ತಿದ್ದರು. ಹಝ್ರತ್ ಪೈಗಂಬರ್[ಸ]ರ ಜೀವನದ ಕೊನೆಯ ವರ್ಷದಲ್ಲಿ, ಎರಡು ಬಾರಿ ಓದಿ ಪೂರ್ಣಗೊಳಿಸಲಾಗಿತ್ತು.

ಪವಿತ್ರ ಖುರ್‌ಆನಿನ ಪ್ರಾಮುಖ್ಯತೆ ಮತ್ತು ರಮಝಾನಿನೊಂದಿಗೆ ಅದರ ಸಂಬಂಧವು ತುಂಬಾ ಹೆಚ್ಚು. ಈ ಸಂಗತಿಯನ್ನು ನಾವು ಯಾವಾಗಲೂ ನೆನಪಿಟ್ಟುಕೊಳ್ಳಬೇಕು ಮತ್ತು ಪವಿತ್ರ ಖುರ್‌ಆನನ್ನು ಓದಲು ಮತ್ತು ಆಲಿಸಲು ಪ್ರಯತ್ನಿಸಬೇಕು. ನಮ್ಮ ಮಸೀದಿಗಳಲ್ಲಿ ಪವಿತ್ರ ಖುರ್‌ಆನಿನ ದರ್ಸ್‌ಗಳು ನಡೆಯುತ್ತವೆ, ತರಾವೀಹ್ ಸಹ ನಡೆಯುತ್ತವೆ. ಪವಿತ್ರ ಖುರ್‌ಆನಿನ ತಿಲಾವತಿಗೆ ಒತ್ತು ಕೊಡಲಾಗುತ್ತದೆ. ಎಮ್‌ಟಿಎಯಲ್ಲಿಯೂ ಪ್ರತಿದಿನ ತಿಲಾವತಿನ ಪ್ರಸಾರವಾಗುತ್ತದೆ. ಅದನ್ನು ಸಹ ಆಲಿಸಬೇಕು. ಆದರೆ ಪವಿತ್ರ ಖುರ್‌ಆನನ್ನು ಕೇಳಿದ ನಂತರ ಅದರ ಪ್ರಕಾರ ನಡೆಯಲು ಸಹ ಪ್ರಯತ್ನಿಸುವಾಗ ಮಾತ್ರ ಅದರ ನಿಜವಾದ ಅನುಗ್ರಹಗಳು ಲಭಿಸುವುದು. ಇದು ಯಾವುದೇ ಸಂದೇಹವಿಲ್ಲದ ಮತ್ತು ಧರ್ಮನಿಷ್ಠರಿಗೆ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ ಎಂದು ಅಲ್ಲಾಹನು ಪವಿತ್ರ ಖುರ್‌ಆನಿನ ಆರಂಭದಲ್ಲಿಯೇ ಹೇಳಿದ್ದಾನೆ. ಆದ್ದರಿಂದ, ತಖ್ವದೊಂದಿಗೆ ನಡೆಯಲು ಮತ್ತು ನಿಜವಾದ ಸತ್ಯವಿಶ್ವಾಸಿಗಳಾಗಲು ಈ ಗ್ರಂಥವನ್ನು ಪಾಲಿಸುವುದು ಅಗತ್ಯವೆಂದು ಅಲ್ಲಾಹನು ಹೇಳಿದ್ದಾನೆ. ನಿಜವಾದ ಸತ್ಯವಿಶ್ವಾಸಿಗಳಾಗಲು ರಮಝಾನಿನಲ್ಲಿ ವಿಶೇಷ ಗಮನವಿರುತ್ತದೆ. ತಖ್ವವನ್ನು ಗಳಿಸಲು ವಿಶೇಷವಾಗಿ ಪ್ರಯತ್ನಿಸಲಾಗುತ್ತದೆ. ಅದಕ್ಕಿರುವ ಮಾರ್ಗವನ್ನು ಅಲ್ಲಾಹನು ನಮಗೆ ತಿಳಿಸಿಕೊಟ್ಟಿದ್ದಾನೆ. ಅದೇನೆಂದರೆ, ಈ ಪ್ರಯತ್ನ ಮತ್ತು ಬಯಕೆ ಹೊಂದಿರುವುದಾದರೆ, ಪವಿತ್ರ ಖುರ್‌ಆನನ್ನು ಬಹಳಷ್ಟು ಓದಬೇಕು ಮತ್ತು ಅದನ್ನು ಪಾಲಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಇದರ ವರದಾನಗಳ ಮತ್ತು ಅನುಗ್ರಹಗಳ ಬಾಗಿಲು ಯಾವಾಗಲೂ ತೆರೆದಿದೆ. ಹಝ್ರತ್ ಪೈಗಂಬರ್[ಸ]ರ ಕಾಲದಲ್ಲಿ ಇದ್ದಂತೆ ಇದು ಪ್ರತಿ ಕಾಲದಲ್ಲಿಯೂ ಪ್ರಕಾಶಮಾನವಾಗಿದೆ."

ಆದ್ದರಿಂದ, ರಮಝಾನಿನಲ್ಲಿ ನಾವು ಪವಿತ್ರ ಖುರ್‌ಆನನ್ನು ಓದುವುದಕ್ಕೆ ವಿಶೇಷ ಗಮನ ನೀಡುವ ಜೊತೆಗೆ, ಅದರ ಬೋಧನೆಗಳನ್ನು ಪಾಲಿಸಲು ಸಹ ಪ್ರಯತ್ನಿಸಬೇಕು. ರಮಝಾನಿನಲ್ಲಿ ಪ್ರತಿಯೊಬ್ಬರೂ ತಮ್ಮ ಶಕ್ತಿಗೆ ಅನುಗುಣವಾಗಿ ಪವಿತ್ರ ಖುರ್‌ಆನನ್ನು ಓದುತ್ತಾರೆ. ಒಂದು ಬಾರಿ ಓದಿ ಪೂರ್ಣಗೊಳಿಸಲು ಸಾಧ್ಯವಿಲ್ಲದವರು ಸಹ ರಮಝಾನಿನ ದಿನಗಳಲ್ಲಿ ಸ್ವಲ್ಪ ಭಾಗವನ್ನಾದರೂ ಓದಲು ಖಂಡಿತವಾಗಿಯೂ ಪ್ರಯತ್ನಿಸುತ್ತಾರೆ. ರಮಝಾನಿನಲ್ಲಿ ಪ್ರತಿಯೊಬ್ಬರು ಪವಿತ್ರ ಖುರ್‌ಆನನ್ನು ಕನಿಷ್ಠ ಒಂದು ಬಾರಿ ಓದಿ ಮುಗಿಸಲು ಪ್ರಯತ್ನಿಸಬೇಕು. ಅದೇ ರೀತಿ, ಪವಿತ್ರ ಖುರ್‌ಆನಿನ ಅನುವಾದ ಮತ್ತು ವ್ಯಾಖ್ಯಾನವನ್ನು ಓದುವುದರತ್ತ ಗಮನಹರಿಸಬೇಕು. ಈ ರೀತಿಯಾಗಿ, ನಮಗೆ ಒಳ್ಳೆಯದು ಮತ್ತು ಕೆಟ್ಟದ್ದರ ಸರಿಯಾದ ಜ್ಞಾನ ಲಭಿಸುತ್ತದೆ.

ಪವಿತ್ರ ಖುರ್‌ಆನ್ ತುಂಬಾ ಕಷ್ಟಕರವಾದ ಗ್ರಂಥವಾಗಿದೆ ಎಂದು ಕೆಲವರು ಭಾವಿಸುತ್ತಾರೆ, ಆದರೆ ನಾವು ಖುರ್‌ಆನನ್ನು ಬೋಧನೆಗಾಗಿ ಸುಲಭಗೊಳಿಸಿದ್ದೇವೆ, ಆದ್ದರಿಂದ ಉಪದೇಶವನ್ನು ಪಾಲಿಸುಕೊಳ್ಳುವವರು ಯಾರಾದರೂ ಇದ್ದಾರೆಯೇ ಎಂದು ಅಲ್ಲಾಹನು ಕೇಳುತ್ತಾನೆ. ಇದು ಅಲ್ಲಾಹನ ವಾದವಾಗಿದೆ, ಅಲ್ಲಾಹನು ಹೇಳುತ್ತಾನೆ: "ನಾನು ಪವಿತ್ರ ಖುರ್‌ಆನಿನಲ್ಲಿ ಸುಲಭವಾದ ಬೋಧನೆಯನ್ನು ನೀಡಿದ್ದೇನೆ, ಈ ಬೋಧನೆಯನ್ನು ಪಾಲಿಸಲು ನೀವು ಪೂರ್ಣ ಪ್ರಯತ್ನವನ್ನು ಮಾಡಬೇಕು ಎಂಬುದಾಗಿದೆ ನನ್ನ ಉಪದೇಶ." ಪವಿತ್ರ ಖುರ್‌ಆನನ್ನು ಮನವರಿಕೆ ಮಾಡಿಕೊಳ್ಳಲು ಅಲ್ಲಾಹನು ಪ್ರತಿಯೊಂದು ಕಾಲಘಟ್ಟದಲ್ಲಿ ಶಿಕ್ಷಕರನ್ನು ಸಹ ಕಳುಹಿಸಿದ್ದಾನೆ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಕಳುಹಿಸಿದನು. ಅವರು ನಮಗೆ ಎಲ್ಲವನ್ನೂ ತಿಳಿಸಿದ್ದಾರೆ. ಅಂತಿದ್ದೂ ನಾವು ಅದನ್ನು ಪಾಲಿಸದಿದ್ದರೆ ಅದು ನಮ್ಮ ದೌರ್ಭಾಗ್ಯವಾಗುವುದು.

ಅದೇ ರೀತಿಯಲ್ಲಿ, ಖಲೀಫರು ಸಹ ವ್ಯಾಖ್ಯಾನಿಸಿದ್ದಾರೆ. ಹಝ್ರತ್ ಮುಸ್ಲಿಹ್ ಮೌಊದ್[ರ] ತಫ್ಸೀರ್ ಕಬೀರನ್ನು

ಬರೆದಿದ್ದಾರೆ, ಅದರಲ್ಲಿ ಸುಮಾರು ಅರ್ಧದಷ್ಟು ಖುರ್‌ಆನಿನ ವ್ಯಾಖ್ಯಾನವಿದೆ. ಇದಲ್ಲದೇ ಇತರ ಅನುವಾದಗಳು ಮತ್ತು ವ್ಯಾಖ್ಯಾನಗಳಿವೆ. ತಫ್ಸೀರ್ ಸಗೀರ್ ಇದೆ. ಅದರಲ್ಲೂ ಸಾಕಷ್ಟು ವಿವರಣೆಗಳಿವೆ. ಜಮಾಅತಿನಲ್ಲಿ ಅನೇಕ ಭಾಷೆಗಳಲ್ಲಿ ಅನುವಾದಗಳು ಆಗುತ್ತಿವೆ. ಆದ್ದರಿಂದ ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಓದಲು ಪ್ರಯತ್ನಿಸುವ ಜೊತೆಗೆ, ಅದರ ಅನುವಾದ ಮತ್ತು ವ್ಯಾಖ್ಯಾನಗಳೊಂದಿಗೆ ಅದರ ಅರ್ಥ ಮತ್ತು ಆದೇಶಗಳನ್ನು ಮನವರಿಕೆ ಮಾಡಲು ಮತ್ತು ಅದರ ಪ್ರಕಾರ ನಡೆಯಲು ಪ್ರಯತ್ನಿಸಬೇಕು.

(ಹುಝೂರ್ ಹೇಳಿದರು:) ಮಕ್ಕಳ ಖುರ್‌ಆನ್ ಆಮೀನ್‌ಗಾಗಿ ಜನರು ನನ್ನ ಬಳಿ ಬರುತ್ತಾರೆ. ಅವರು ನೆನಪಿಟ್ಟುಕೊಳ್ಳಬೇಕು, ಅವರು ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿ ಒಂದು ಕರ್ತವ್ಯವನ್ನು ಪೂರೈಸಿಕೊಂಡಿದ್ದಾರೆ. ಅದರ ಜೊತೆಗೆ ಪ್ರತಿಯೊಬ್ಬ ಅಹ್ಮದಿಯೂ ಸ್ವತಃ ಹಾಗೂ ತನ್ನ ಹೆಂಡತಿ ಮಕ್ಕಳು ಪವಿತ್ರ ಖುರ್‌ಆನನ್ನು ಓದುವುದು ಹಾಗೂ ಅದರ ಅನುವಾದವನ್ನು ಓದುವುದರ ಕುರಿತು ಗಮನ ನೀಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಹೇಳುತ್ತಾರೆ: ಹೆಚ್ಚಿನ ಮುಸಲ್ಮಾನರು ಪವಿತ್ರ ಖುರ್‌ಆನನ್ನು ಬಿಟ್ಟುಬಿಟ್ಟಿದ್ದಾರೆ ಎಂಬುದು ನಿಜ, ಆದರೆ ಪವಿತ್ರ ಖುರ್‌ಆನಿನ ಪ್ರಕಾಶ ಮತ್ತು ಅನುಗ್ರಹಗಳು ಹಾಗೂ ಅದರ ಪ್ರಭಾವಗಳು ಸದಾ ಜೀವಂತವಾಗಿವೆ ಮತ್ತು ತಾಜಾ ಆಗಿಯೇ ಇವೆ. ನನ್ನನ್ನು ಈ ಕಾಲಘಟ್ಟದಲ್ಲಿ ಅದಕ್ಕೆ ಪುರಾವೆಯಾಗಿ ಕಳುಹಿಸಲಾಗಿದೆ. ಪವಿತ್ರ ಖುರ್‌ಆನನ್ನು ಬಿಟ್ಟುಕೊಂಡು ಯಶಸ್ಸು ಅಸಾಧ್ಯ ಮತ್ತು ಅಸಂಭವನೀಯ. ಅದಿಲ್ಲದೇ ಜನರು ಹುಡುಕುತ್ತಿರುವ ಯಶಸ್ಸು ಕೇವಲ ಕಾಲ್ಪನಿಕವಾಗಿದೆ.

ಹಝ್ರತ್ ಪೈಗಂಬರ್[ಸ] ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ಓದಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ, ಉತ್ತಮವಾದ ರುಚಿ ಮತ್ತು ಪರಿಮಳ ಎರಡೂ ಇರುವ ಹಣ್ಣಿನಂತೆ ಆಗಿದೆ. ಪವಿತ್ರ ಖುರ್‌ಆನನ್ನು ಓದದಿದ್ದರೂ ಅದನ್ನು ಪಾಲಿಸುವ ಸತ್ಯವಿಶ್ವಾಸಿಯ ಉದಾಹರಣೆ, ಎಂದರೆ ಇಲ್ಲಿಂದ ಅಲ್ಲಿಂದ ಮಾತುಗಳನ್ನು ಆಲಿಸಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ ಖರ್ಜೂರದಂತೆ ಆಗಿದೆ. ಅದರ ರುಚಿ ಉತ್ತಮವಾಗಿದೆ, ಆದರೆ ಅದಕ್ಕೆ ಯಾವುದೇ ಪರಿಮಳವಿಲ್ಲ. ಪವಿತ್ರ ಖುರ್‌ಆನನ್ನು ಓದುವ ಕಪಟವಿಶ್ವಾಸಿಯ ಉದಾಹರಣೆ, ಪರಿಮಳಯುಕ್ತ ಗಿಡದಂತೆ ಆಗಿದೆ. ಅದರ ಪರಿಮಳವು ಚೆನ್ನಾಗಿದೆ, ಆದರೆ ರುಚಿ ಕಹಿಯಾಗಿದೆ. ಪವಿತ್ರ ಖುರ್‌ಆನನ್ನು ಓದದ ಕಪಟವಿಶ್ವಾಸಿಯ ಉದಾಹರಣೆ, ಪರಿಮಳ ಮತ್ತು ರುಚಿ ಎರಡೂ ಕಹಿಯಾಗಿರುವ ಕಹಿ ಹಣ್ಣಿನಂತೆ ಆಗಿದೆ.

ಇನ್ನೊಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್[ಸ] ಹೇಳಿದರು: "ಜನರಲ್ಲಿ ಕೆಲವರು ಅಹ್ಲುಲ್ಲಾಹ್ (ಅಲ್ಲಾಹನ ಜನರು) ಆಗಿರುತ್ತಾರೆ" ವರದಿಗಾರರು ಹೇಳುತ್ತಾರೆ, ನಾವು ಹಝ್ರತ್ ಪೈಗಂಬರ್[ಸ]ರೊಡನೆ ಕೇಳಿದೆವು, "ಯಾ ರಸೂಲುಲ್ಲಾಹ್, ಅಹ್ಲುಲ್ಲಾಹ್ ಯಾರು? ಹಝ್ರತ್ ಪೈಗಂಬರ್[ಸ] ಹೇಳಿದರು: ಅವರು ಪವಿತ್ರ ಖುರ್‌ಆನಿನ ಜನರಾಗಿದ್ದಾರೆ. ಅವರು ಅಹ್ಲುಲ್ಲಾಹ್ ಮತ್ತು ಅಲ್ಲಾಹನ ವಿಶೇಷ ಜನರು ಆಗಿರುತ್ತಾರೆ. ಅಂದರೆ ಪವಿತ್ರ ಖುರ್‌ಆನನ್ನು ಓದುವವರು ಮತ್ತು ಅದನ್ನು ಪಾಲಿಸುವವರು. ಹಝ್ರತ್ ಮಸೀಹ್ ಮೌಊದ್ ಅಲೈಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನಿನ ಪ್ರಕಾರ ನಡೆಯುವವರು ಮಾತ್ರ ಯಶಸ್ವಿಯಾಗುತ್ತಾರೆ.

ಮುಸಲ್ಮಾನರ ಈಗಿನ ಪರಿಸ್ಥಿತಿ ಹೇಗಿದೆ ಎಂದರೆ, ಎಲ್ಲೆಡೆ ಗಲಭೆಗಳು ನಡೆಯುತ್ತಿವೆ, ಸರ್ಕಾರಗಳು ಜನರೊಂದಿಗೆ ಹೋರಾಡುತ್ತಿವೆ ಮತ್ತು ಜನರು ಸರ್ಕಾರಗಳ ಮೇಲೆ ದಾಳಿ ಮಾಡುತ್ತಿದ್ದಾರೆ. ಇವೆಲ್ಲವೂ ಪವಿತ್ರ ಖುರ್‌ಆನನ್ನು ತ್ಯಜಿಸಿದ ಫಲಿತಾಂಶವಾಗಿದೆ. ಹೇಳಲಿಕ್ಕೆ ಉಭಯ ಪಕ್ಷಗಳ ಕೈಗಳಲ್ಲಿಯೂ ಪವಿತ್ರ ಖುರ್‌ಆನ್ ಇದೆ, ಆದರೆ ಎರಡೂ ಪಕ್ಷದವರು ಪವಿತ್ರ ಖುರ್‌ಆನಿನ ಬೋಧನೆಗಳಿಂದ ದೂರವಿದ್ದಾರೆ. ಅವರು ಪವಿತ್ರ ಖುರ್‌ಆನನ್ನು ಪಾಲಿಸುವವರಾಗುತ್ತಿದ್ದರೆ, ಇವೆಲ್ಲ ಖಂಡಿತವಾಗಿಯೂ ಸಂಭವಿಸುತ್ತಿರಲಿಲ್ಲ. ಈ ಯುಗದಲ್ಲಿ ಅಲ್ಲಾಹನು ಕಳುಹಿಸಿದ ಪ್ರತಿನಿಧಿಯನ್ನು ಅವರು ನಿರಾಕರಿಸಿದ್ದಾರೆ, ಅವರನ್ನು ನಂಬಲು ಸಿದ್ಧರಲ್ಲ. ಇಂತಹ ಸ್ಥಿತಿಯಲ್ಲಿ ಅವರು ಪವಿತ್ರ ಖುರ್‌ಆನಿನಿಂದ ಯಾವುದೇ ಪ್ರಯೋಜನವನ್ನು ಪಡೆಯಲು ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೆನಪಿಡಿರಿ, ಪವಿತ್ರ ಖುರ್‌ಆನ್ ನಿಜವಾದ ಅನುಗ್ರಹಗಳ ಮೂಲ ಮತ್ತು ಮೋಕ್ಷದ ನಿಜವಾದ ಮಾರ್ಗವಾಗಿದೆ. ಈಗಲಾದರೂ ಈ ಚಿಲುಮೆಯನ್ನು ಮಹತ್ತಾದ ಅನುಗ್ರಹವೆಂದು ಪರಿಗಣಿಸುವುದು ಮತ್ತು ಅದನ್ನು ಗೌರವಿಸುವುದು ಅಗತ್ಯ. ಅದನ್ನು ಗೌರವಿಸುವುದು ಎಂದರೆ ಅದರ ಪ್ರಕಾರ ನಡೆಯುವುದಾಗಿದೆ. ಹಾಗೆ ಆದರೆ ಅವರ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಅಲ್ಲಾಹನು ಹೇಗೆ ನಿವಾರಿಸುತ್ತಾನೆ ಎಂಬುದನ್ನು ಅವರು ನೋಡುವರು.

ಮುಸ್ಲಿಮರ ಅವಸ್ಥೆ ಏನೆಂದರೆ, ಅವರು ಪವಿತ್ರ ಖುರ್‌ಆನಿನ ಬೋಧನೆಗಳಿಂದ ದೂರ ಸರಿದಿದ್ದಾರೆ, ಅವರು ಪವಿತ್ರ ಖುರ್‌ಆನನ್ನು ಬಿಟ್ಟುಬಿಟ್ಟಿದ್ದಾರೆ, ಅದನ್ನು ಪಾಲಿಸುವುದಿಲ್ಲ ಮತ್ತು ಪವಿತ್ರ ಖುರ್‌ಆನಿನೊಂದಿಗೆ ಪ್ರೀತಿ ಇರುವುದಾಗಿ ಕೇವಲ ವಾದಿಸುತ್ತಾರೆ. ಪಾಕಿಸ್ತಾನದಲ್ಲಿ ಅಹ್ಮದಿಯರು ಪವಿತ್ರ ಖುರ್‌ಆನನ್ನು ಓದಬಾರದು ಎಂದು ಅವರು ನಿಷೇಧ ಹೇರಿದ್ದಾರೆ. ಅವರು ಸ್ವತಃ ಅದರ ಪ್ರಕಾರ ನಡೆಯುವುದಿಲ್ಲ. ಅಹ್ಮದೀಯರ ಮೇಲೆ ಅವರು ಎಷ್ಟು ನಿರ್ಬಂಧವನ್ನು ಹೇರಿದರೂ, ಅವರು ನಮ್ಮ ಹೃದಯಗಳಿಂದ ಪವಿತ್ರ ಖುರ್‌ಆನಿನ ಬೋಧನೆಗಳನ್ನು ತೆಗೆದುಹಾಕಲು ಸಾಧ್ಯವಿಲ್ಲ, ಅವರು ಎಷ್ಟು ಪ್ರಯತ್ನಿಸಿದರೂ, ನಮ್ಮ ಹೃದಯಗಳಿಂದ ಅದರ ಪ್ರೀತಿಯನ್ನು ತೆಗೆದುಹಾಕಲು ಅವರಿಂದ ಸಾಧ್ಯವಿಲ್ಲ.

ಆದ್ದರಿಂದ ಈ ಕಾಲದಲ್ಲಿ ಅತ್ಯಂತ ದೊಡ್ಡ ಕರ್ತವ್ಯ ಅಹ್ಮದಿಯರದ್ದಾಗಿದೆ. ಅಹ್ಮದಿ ಮುಸ್ಲಿಮರ ಕರ್ತವ್ಯವೆಂದರೆ, ಅವರು ಪವಿತ್ರ ಖುರ್‌ಆನಿನ ಪ್ರಕಾರ ನಡೆಯಬೇಕು. ಇದರಿಂದ ಇಸ್ಲಾಮೇತರ ಲೋಕ ಅವರ ನಡೆವಳಿಕೆಯನ್ನು ನೋಡಿ ನಿಜವಾದ ಇಸ್ಲಾಮಿನ ಬೋಧನೆಗಳು ಯಾವುವು ಮತ್ತು ಪವಿತ್ರ ಖುರ್‌ಆನಿನ ಆಜ್ಞೆಗಳು ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಅವು ಶಾಂತಿ, ನೆಮ್ಮದಿ ಮತ್ತು ಪ್ರೀತಿಯ ಆಜ್ಞೆಗಳಾಗಿವೆ. ಅವು ಸಮಾಜದಲ್ಲಿ ಸಹೋದರತೆ ಮತ್ತು ಭ್ರಾತೃತ್ವವನ್ನು ಹರಡುವ ಆಜ್ಞೆಗಳಾಗಿವೆ. ಮಾನವರ ಹಕ್ಕುಗಳನ್ನು ಪೂರೈಸುವ ಆಜ್ಞೆಗಳಾಗಿವೆ. ಆದ್ದರಿಂದ ಅಹ್ಮದಿಯರು ಈ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಜಿಬ್ರೀಲ್(ಅ) ಒಂದು ಬಾರಿ ಹಝ್ರತ್ ಪೈಗಂಬರ್(ಸ) ರ ಬಳಿಗೆ ಬಂದು ಹೀಗೆ ಹೇಳಿದರು: ಶೀಘ್ರದಲ್ಲೇ ಅನೇಕ ಫಿತ್‌ನಗಳು (ಪಿತೂರಿಗಳು) ಉಂಟಾಗುವುದು. ಈ ಫಿತ್‌ನದಿಂದ ಮುಕ್ತಿ ಹೊಂದುವುದು ಹೇಗೆ ಎಂದು ಕೇಳಲಾದಾಗ, ಜಿಬ್ರೀಲ್(ಅ) ಹೇಳಿದರು: ಅಲ್ಲಾಹನ ಗ್ರಂಥದ ಮೂಲಕ ಈ ಪಿತೂರಿಗಳಿಂದ ಮುಕ್ತಿ ಹೊಂದಲು ಸಾಧ್ಯವಿದೆ.

(ಹುಝೂರ್ ಹೇಳಿದರು:) ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ರಕ್ಷಿಸಲು ನಾವು ಅಲ್ಲಾಹನ ಗ್ರಂಥದ ಕಡೆಗೆ ಗಮನ ನೀಡುವ ಅಗತ್ಯವಿದೆ. ಆಗ ಮಾತ್ರ ನಾವು ಮಾರ್ಗದರ್ಶನವನ್ನು ಪಡೆಯಬಹುದು ಮತ್ತು ಫಿತ್‌ನಗಳಿಂದ ತಪ್ಪಿಸಿಕೊಳ್ಳಬಹುದು ಹಾಗೂ ಅಲ್ಲಾಹನು ನಮಗಾಗಿ ಅವತೀರ್ಣಗೊಳಿಸಿದ ಆಜ್ಞೆಗಳನ್ನು ಅರ್ಥಮಾಡಿಕೊಳ್ಳಬಹುದು.

ಹಝ್ರತ್ ಪೈಗಂಬರ್(ಸ) ಹೇಳಿದರು: ಪವಿತ್ರ ಖುರ್‌ಆನನ್ನು ಬಹಿರಂಗವಾಗಿ ಓದುವವನು ಬಹಿರಂಗವಾಗಿ ಸದಖ (ದಾನ) ಮಾಡುವವನಂತೆ ಆಗಿರುತ್ತಾನೆ. ಪವಿತ್ರ ಖುರ್‌ಆನನ್ನು ರಹಸ್ಯವಾಗಿ ಓದುವವನು ರಹಸ್ಯವಾಗಿ ದಾನ ಮಾಡುವವನಂತೆ ಆಗಿದ್ದಾನೆ.

(ಹುಝೂರ್ ಹೇಳಿದರು:) ವಿಪತ್ತುಗಳು, ಅಪಾಯಗಳು ಮತ್ತು ಪಿತೂರಿಗಳನ್ನು ಸದಖ ದೂರಮಾಡುತ್ತದೆ ಎಂದು ಹದೀಸುಗಳಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ, ಪವಿತ್ರ ಖುರ್‌ಆನನ್ನು ಓದುವುದು ಮತ್ತು ಅರ್ಥವಾಗುವ ರೀತಿಯಲ್ಲಿ ಓದುವುದು ಸದಖದಂತೆ ಸ್ವೀಕರಿಸಲ್ಪಡುತ್ತದೆ ಮತ್ತು ಅದರ ಅನುಗ್ರಹದಿಂದ ಮನುಷ್ಯನು ಎಲ್ಲ ಫಿತ್‌ನಗಳಿಂದ ರಕ್ಷಿಸಲ್ಪಡುತ್ತಾನೆ ಎಂದು ನಾವು ನೆನಪಿಟ್ಟುಕೊಳ್ಳಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೃದಯವು ಕಠಿಣವಾಗಿದ್ದರೆ, ಅದನ್ನು ಮೃದುಗೊಳಿಸುವ ಮಾರ್ಗವೆಂದರೆ ಪವಿತ್ರ ಖುರ್‌ಆನನ್ನು ಪದೇ ಪದೇ ಓದುವುದು ಆಗಿದೆ. ಎಲ್ಲೆಲ್ಲ ದುಆದ ಪ್ರಸ್ತಾಪ ಇರುತ್ತದೆಯೋ ಅಲ್ಲಿ ಸತ್ಯವಿಶ್ವಾಸಿಯ ಹೃದಯವು ಸಹ ಅದೇ ದೈವಿಕ ಕರುಣೆಯು ತನ್ನ ಮೇಲೆ ವರ್ಷಿಸಬೇಕೆಂದು ಬಯಸುತ್ತದೆ. ಪವಿತ್ರ ಖುರ್‌ಆನ್ ಒಂದು ತೋಟದಂತಿದೆ, ಒಂದು ಸ್ಥಳದಿಂದ ವ್ಯಕ್ತಿಯು ಒಂದು ರೀತಿಯ ಹಣ್ಣನ್ನು ಆರಿಸುತ್ತಾನೆ, ನಂತರ ಮುಂದೆ ಸಾಗುತ್ತಾ ಇನ್ನೊಂದು ರೀತಿಯ ಹಣ್ಣನ್ನು ಆರಿಸುತ್ತಾನೆ. ಆದ್ದರಿಂದ, ಪ್ರತಿಯೊಂದು ಸ್ಥಳಕ್ಕೆ ಅನುಗುಣವಾಗಿ ಪ್ರಯೋಜನವನ್ನು ಪಡೆಯಬೇಕು.

ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು: ರಮಝಾನ್ ದಿನಗಳಲ್ಲಿ ನಾವು ವಿಶೇಷವಾಗಿ ಪವಿತ್ರ ಖುರ್‌ಆನಿನ ಕಡೆಗೆ ಗಮನ ನೀಡುತ್ತಿರುವುದರ ಜೊತೆಗೆ ನಾವು ಅದನ್ನು ಯಾವಾಗಲೂ ನೆಲೆನಿಲ್ಲಿಸುವೆವು ಮತ್ತು ಅದನ್ನು ಪಾಲಿಸುವುದರ ಕಡೆಗೂ ಗಮನ ನೀಡುವೆವು ಮತ್ತು ನಮ್ಮ ಮಕ್ಕಳಿಗೆ ಸಹ ಪವಿತ್ರ ಖುರ್‌ಆನ್ ಓದಲು ಉಪದೇಶಿಸುವೆವು ಎಂದು ನಾವು ಪ್ರತಿಜ್ಞೆ ಮಾಡಬೇಕು. ಅದರಿಂದ ನಮ್ಮ ಜೀವನವು ಯಾವಾಗಲೂ ಯಶಸ್ವಿಯಾಗುವುದು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak'***, *Islamabad, Tilford,* U.K. On 14-03-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon